ದಿನಾಂಕ : 04-04-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ವಾದಿಯು 7-8 ವರ್ಷಗಳಿಂದ ಪರಿಚಿತರಾಗಿದ್ದಾರೆ . ಪ್ರತಿವಾದಿಗಳು 10-12 ವರ್ಷಗಳಿಂದ ಪರಿಚಿತರಾಗಿದ್ದಾರೆ. 1 ನೇ ಪ್ರತಿವಾದಿಯ ಗಂಡ ನಟರಾಜು ರವರ ಜೀವಿತಾವಧಿಯಲ್ಲಿಂದಲೂ ಪ್ರತಿವಾದಿಗಳು ಪರಿಚಿತರೇ ಎಂದರೆ ಸಾಕ್ಷಿಯು ಇಲ್ಲ ಎಂದು ತಿಳಿಸಿದ್ದಾರೆ. ನಾನು ಮತ್ತು ವಾದಿ ಒಟ್ಟಿಗೆ ಜಂಟಿಯಾಗಿ ಲೇಔಟ್ ಗಳನ್ನು ಮಾಡುತ್ತೇವೆ ಎಂದರೆ ಸರಿಯಲ್ಲ . ದಾವಾ ಸ್ವತ್ತನ್ನು ಪ್ರತಿವಾದಿಗಳು ಮಾರಾಟ ಮಾಡಲು ಬಯಸಿದ್ದಾರೆ ಎಂಬ ವಿಚಾರ ಯಾರಿಂದ ತಿಳಿಯಿತು ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಕುಟುಂಬದ ಸ್ನೇಹಿತರಾದ ಜಗದೀಶ್ ರವರ ಮೂಲಕ ತಿಳಿಯಿತು ಎಂದು ತಿಳಿಸಿದ್ದಾರೆ. ಕರಾರು ಪತ್ರ ನೋಂದಣಿಯಾಗುವ 2 ತಿಂಗಳ ಮೊದಲೇ ಸ್ವತ್ತಿನ ಮಾರಾಟದ ವಿಚಾರ ತಿಳಿದಿತ್ತು . 1 ನೇ ಪ್ರತಿವಾದಿಯ ಹಳೆಯ ಮನೆಯಲ್ಲಿ ಸ್ವತ್ತಿನ ಖರೀದಿಯ ಮಾತುಕತೆ ನಡೆದಿತ್ತು . ಯಾವ ದಿನಾಂಕದಂದು ಮಾತುಕತೆ ನಡೆದಿತ್ತು ಎಂದು ಹೇಳಲು ನೆನಪಾಗುತ್ತಿಲ್ಲ , ಮಾತುಕತೆಯಲ್ಲಿ ನಾನು , ವಾದಿ , ಜಗದೀಶ್ ಮತ್ತು ಪ್ರತಿವಾದಿಗಳು ಭಾಗವಹಿಸಿದ್ದೆವು .

ಕರಾರು ಪತ್ರಕ್ಕೆ ಛಾಪಾಕಾಗದವನ್ನು ಯಾರು ತಂದಿದ್ದರು ಎಂದು ಗೊತ್ತಿಲ್ಲ . ನಾನು ಆ ದಿನ ತಾಲ್ಲೂಕು ಕಚೇರಿಯ ಬಳಿಗೆ ಬೆಳಗ್ಗೆ 11.00 ಅಥವಾ 11.30 ಕ್ಕೆ ಹೋಗಿದ್ದೆ . ಪತ್ರ ಬರಹಗಾರರಾದ ವಿಶ್ವನಾಥ ಮತ್ತು ರಮೇಶ್ ಚಂದ್ರ ರವರು ಕರಾರು ಪತ್ರ ತಯಾರಿಸಿಕೊಟ್ಟಿದ್ದಾರೆ . ಛಾಪಾಕಾಗದ ಎಷ್ಟು ಮೌಲ್ಯದ್ದೆಂದು ಗೊತ್ತಿಲ್ಲ . ಕರಾರು ಪತ್ರ ಬರೆಯುವಾಗ ನಾನು , ವಾದಿ , ಜಗದೀಶ್ ಮತ್ತು 1ನೇ ಪ್ರತಿವಾದಿ ವಿಶ್ವನಾಥ ಮತ್ತು ರಮೇಶ್ ಚಂದ್ರ ಹಾಜರಿದ್ದೆವು , ಆ ನಂತರ 2 ನೇ ಪ್ರತಿವಾದಿಯನ್ನು ಕಾಲೇಜಿನಿಂದ ಕರೆತರಲಾಯಿತು . ಪತ್ರ ಬರೆದ ನಿಖರ ಸಮಯ ಹೇಳಲು ಆಗುವುದಿಲ್ಲ . 1 ನೇ ಪ್ರತಿವಾದಿ ತಾಲ್ಲೂಕು ಕಚೇರಿಯ ಬಳಿಗೆ ಎಷ್ಟು ಗಂಟೆಗೆ ಬಂದರು ಎಂದು ಗೊತ್ತಿಲ್ಲ . ಕರಾರು ಪತ್ರಕ್ಕೆ ನಾನು , 1 ಮತ್ತು 2 ನೇ ಪ್ರತಿವಾದಿ ಜಗದೀಶ್ ,

ವಿಶ್ವನಾಥ , ವಾದಿ ಸಹಿ ಮಾಡಿದ್ದೇವೆ , 3 ನೇ ಪ್ರತಿವಾದಿ ಅಪ್ರಾಪ್ತ ವಯಸ್ಕರಾಗಿದ್ದರಿಂದ ಆಕೆಯ ಪರವಾಗಿ 1 ನೇ ಪ್ರತಿವಾದಿ ಸಹಿ ಮಾಡಿದ್ದಾರೆ . ನಿಪಿ -1 ದಾಖಲೆಯಲ್ಲಿ ನಿಮ್ಮ ಎಲ್ಲಿದೆ ಎಂದು ತೋರಿಸಬಹುದೇ ಎಂದು ಸಾಕ್ಷಿಗೆ ನಿಪಿ -1 ದಾಖಲೆಯನ್ನು ನೀಡಲಾಗಿ ಸಾಕ್ಷಿಯು ಅದನ್ನು ಪರಿಶೀಲಿಸಿ ಅದರಲ್ಲಿ ನನ್ನ ಸಹಿ ಇಲ್ಲ ಬೇರೊಂದು ದಾಖಲೆಗೆ ಸಹಿ ಮಾಡಿದ್ದೇನೆ ಎಂದು ತಿಳಿಸಿದ್ದಾರೆ . ನಿಪಿ -1 ನ್ನು ಬರೆಯುವಾಗ ನಾನು ಹಾಜರಿರಲಿಲ್ಲ ಮತ್ತು ಸಹಿಯನ್ನು ಸಹಾ ಮಾಡಿಲ್ಲ ಎಂದರೆ ಸರಿಯಲ್ಲ , ನನ್ನ ಮುಖಾಂತರವೇ ವ್ಯಪಾರವಾಗಿದೆ ಎಂದು ತಿಳಿಸಿದ್ದಾರೆ . ನಿಪಿ -1 ರಲ್ಲಿ ಏನು ಬರದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ .

ವಾದಿಯು ಪ್ರತಿವಾದಿಗಳಿಗೆ ಕರ್ನಾಟಕ ಬ್ಯಾಂಕ್ , ವಿವೇಕಾನಂದ ರಸ್ತೆ ಶಾಖೆ , ತುಮಕೂರಿನ ಚೆಕ್ಕನ್ನು ನೀಡಿದ್ದಾರೆ . ಚೆಕ್ಕಿನ ಸಂಖ್ಯೆ ಗೊತ್ತಿಲ್ಲ . ಚೆಕ್ಕು ನೀಡಿದ 25 ದಿನಗಳ ನಂತರ ಪ್ರತಿವಾದಿಗಳು ಸದರಿ ಚೆಕ್ಕನ್ನು ವಾದಿಗೆ ಹಿಂತಿರುಗಿಸಿದ್ದಾರೆ . ಪ್ರತಿವಾದಿಗಳು ನಮ್ಮ ಮನೆಗೆ ಬಂದು ಚೆಕ್ಕನ್ನು ನನಗೆ ನೀಡಿದ್ದಾರೆ . ವಾದಿಯು ನೀಡಿದ ಮತ್ತೊಂದು ಚೆಕ್ಕಿನ ಸಂಖ್ಯೆಃ 641254 ಆಗಿದೆ . ದಿಃ 27-11-2018 ರಂದು ಸದರಿ ಚೆಕ್ಕನ್ನು ವಾದಿಯು ಪ್ರತಿವಾದಿಗಳಿಗೆ ನೀಡಿದ್ದಾರೆ . ಪ್ರತಿವಾದಿಗಳು ವಾದಿಯು ನೀಡಿದ್ದ ಚೆಕ್ಕನ್ನು ಹಿಂತಿರುಗಿಸಿದ 10 ದಿನಂಗಳ ನಂತರ ಪ್ರತಿವಾದಿಗಳಿಗೆ ವಾದಿಯು ಮತ್ತೊಂದು ಚೆಕ್ಕನ್ನು ನೀಡಿದ್ದಾರೆ . ನಾನು ಹೇಳುವಂತೆ ಪ್ರತಿವಾದಿಗಳು ಯಾವುದೇ ಚೆಕ್ಕನ್ನು ನನಗೆ ಹಿಂತಿರುಗಿಸಿಲ್ಲ , ವಾದಿಯು ಪ್ರತಿವಾದಿಗಳಿಗೆ ಯಾವುದೇ ಚೆಕ್ಕನ್ನು ನೀಡಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹೇಳುವಂತೆ ಪ್ರತಿವಾದಿಗಳು ಕರ್ನಾಟಕ ಬ್ಯಾಂಕ್ , ವಿವೇಕಾನಂದ ರಸ್ತೆ ಶಾಖೆ , ತುಮಕೂರು ಬಳಿಗೆ ಎಂದೂ ಬಂದಿಲ್ಲ ಮತ್ತು ಯಾವುದೇ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಿ ಹಣ ಪಡೆದಿಲ್ಲ ,ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .ಪ್ರತಿವಾದಿಗಳು ವಾದಿಯಿಂದ ರೂ.500/-ಮುಖಬೆಲೆಯ 2 ಬಂಡಲ್ ಹಣವನ್ನು ನಗದು ರೂಪದಲ್ಲಿ ಪಡೆದಿದ್ದಾರೆ . ಸದರಿ ಮೊತ್ತವನ್ನು ಅವರು ಬ್ಯಾಂಕಿನಲ್ಲಿ ಪಡೆದಿದ್ದಾರೆ . ನಾನು ಹೇಳುವಂತೆ ಪ್ರತಿವಾದಿಗಳು ವಾದಿಯಿಂದ ಚೆಕ್ಕ ಅಥವಾ ನಗದು ರೂಪದಲ್ಲಿ ಹಣ ಪಡೆದಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .ಪ್ರತಿವಾದಿಗಳಿಗೆ ದಾವಾ ಸ್ವತ್ತನ್ನು

ಮಾರಾಟ ಮಾಡುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಮನೆ ನಿರ್ಮಿಸುವ ಸಲುವಾಗಿ ಮಾರಾಟ ಮಾಡಿದ್ದಾರೆ , ಹಣ ಪಡೆದ ನಂತರ ಮನೆ ನಿರ್ಮಿಸಿದ್ದಾರೆ ಎಂದು ತಿಳಿಸಿದ್ದಾರೆ . ಪ್ರತಿವಾದಿಗಳು ದಾವಾ ಸ್ವತ್ತನ್ನು ರೂ. 8,25, 000/- ಗಳಿಗೆ ಮಾರಾಟ ಮಾಡುವುದಾಗಿ ಯಾವುದೇ ಮಾತುಕತೆ ನಡೆಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಗೆ ಯಾವುದೇ ಕರಾರು ಪತ್ರ ನೋಂದಾಯಿಸಿಕೊಟ್ಟಿಲ್ಲ , ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ , ಸಾಕ್ಷಿಯು ಮುಂದುವರೆದು ಮೊದಲು ಕರಾರು ಪತ್ರವೊಂದನ್ನು ಬರೆದುಕೊಟ್ಟಿದ್ದರು , ಅದಕ್ಕೆ ನಾನು ಸಹಿ ಮಾಡಿದ್ದೇನೆ , ನಂತರ ನಿಪಿ -1 ನ್ನು ನೋಂದಾಯಿಸಿಕೊಟ್ಟಿದ್ದಾರೆ ಆ ಸಮಯ ಮೊದಲು ಬರೆದುಕೊಟ್ಟಿದ್ದ ಕರಾರು ಪತ್ರವನ್ನು ಹಿಂಪಡೆದಿದ್ದಾರೆ ಎಂದು ತಿಳಿಸಿದ್ದಾರೆ . ಪ್ರತಿವಾದಿಗಳು ನಿಪಿ -1 ಕ್ಕಿಂತ ಮೊದಲೇ ವಾದಿಗೆ ಕರಾರು ಪತ್ರ ಬರೆದುಕೊಟ್ಟಿದ್ದರು ಎಂಬ ವಿಚಾರವನ್ನು ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ . ನಾನು ಹೇಳುವಂತೆ ಪ್ರತಿವಾದಿಗಳಿಗೆ ಯಾವುದೇ ಕರಾರು ಪತ್ರ ಬರೆದು ಕೊಡದೇ ಇದ್ದರೂ ಸಹಾ ನಾನು ಮತ್ತು ವಾದಿ ಒಟ್ಟಾಗಿ ಲೇಔಟ್ ಮಾಡುತ್ತಿದ್ದ ಕಾರಣ ವಾದಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿಯ ಗಂಡ ಮರಣ ಹೊಂದಿರುವ ಕಾರಣ ಮತ್ತು ಅವರ ಮನೆಯಲ್ಲಿ ಪುರಷ ಸದಸ್ಯರು ಇರದೇ ಇರುವ ಕಾರಣ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿಪಿ-1 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ . ವಾದಿಯು ಪ್ರತಿವಾದಿಗಳಿಗೆ ಚೆಕ್ ಮತ್ತು ನಗದು ರೂಪದಲ್ಲಿ ಹಣ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .